2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ145/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಿ ಪಿ ನಂದಕುಮಾರ್ | ಪಿಡಬ್ಲ್ಯೂ-16 |
| ತಂದೆಯ ಹೆಸರು | - | ಎಸ್ ಪಾಂಡು | ಸಿಡಬ್ಲ್ಯೂ -13 |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ತಹಶೀಲ್ದಾರ್, ಕಳಸಾ ತಾಲ್ಲೂಕು | |
| ವಾಸ ಸ್ಥಳ | - | ಕಳಸಾ | |

ದಿನಾಂಕಃ 04.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ದಿನಾಂಕಃ 06.06.2019 ರಿಂದ ದಿನಾಂಕ 11.06.2020 ರವರೆಗೆ ಚಿಕ್ಕಮಗಳೂರಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ರಾಮನಹಳ್ಳಿ ಮುಸ್ಲಿಂ ಜನಾಂಗದ ಸ್ಮಶಾನದಲ್ಲಿ ಹೂಣಲಾಗಿದ್ದ ಎರಡು ವರ್ಷ ವಯಸ್ಸಿನ ಅಮಿಷಾ ಎಂಬ ಒಂದು ಹೆಣ್ಣು ಮಗುವಿನ ಶವವನ್ನು ಹೊರತೆಗೆದು ಡಿ ಎನ್ ಎ ಪರೀಕ್ಷೆಗಾಗಿ ಅದರ ಬಲಗಾಲಿನ ತೊಡೆಯ ಮೂಳೆಯನ್ನು ತೆಗೆಯಲು ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರು, ಉಪ ವಿಭಾಗಾಧಿಕಾರಿಗಳು, ಚಿಕ್ಕಮಗಳೂರು ರವರಿಗೆ ಮನವಿ ಸಲ್ಲಿಸಿದ್ದ ಮೇರೆಗೆ ಸದರಿ ಉಪ ವಿಭಾಗಾಧಿಕಾರಿಗಳು ನನ್ನನ್ನು ಆ ಕೆಲಸಕ್ಕೆ ನೇಮಿಸಿದ್ದರು. ಅದರಂತೆ ನಾನು ದಿನಾಂಕ

10.08.2019 ರಂದು ಬೆಳಿಗ್ಗೆ 10.30 ಗಂಟೆಗೆ ರಾಮನಹಳ್ಳಿ ಮುಸ್ಲಿಂ ಜನಾಂಗದ ಸ್ಮಶಾನಕ್ಕೆ ಹೋದೆನು. ಅಲ್ಲಿಗೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಬಂದಿದ್ದರು ಮತ್ತು ಶವವನ್ನು ತೆಗೆಯಲು ನಗರ ಸಭೆ ನೌಕರರು ಬಂದಿದ್ದರು ಮತ್ತು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಬಂದಿದ್ದರು. ಮೃತ ಮಗುವಿನ ಸಂಬಂಧಿಕರು ಸಹ ಅಲ್ಲಿಗೆ ಬಂದಿದ್ದರು. ಅವರು ಸದರಿ ಮಗುವಿನ ಶವವನ್ನು ಹೂಣಲಾಗಿದ್ದ ಸ್ಥಳವನ್ನು ತೋರಿಸಿದರು. ಸದರಿ ಸ್ಥಳವನ್ನು ನಗರ ಸಭೆ ನೌಕರರಿಂದ ಗುದ್ದಲಿಯ ಸಹಾಯದಿಂದ ಅಗೆಸಲಾಯಿತು. ಅಲ್ಲಿ ಬಿಳಿಯ ಬಟ್ಟೆಯಲ್ಲಿ ಸುತ್ತಲಾಗಿದ್ದ ಎರಡು ವರ್ಷ ವಯಸ್ಸಿನ ಒಂದು ಹೆಣ್ಣು ಮಗುವಿನ ಶವ ಕಂಡು ಬಂತು, ಅದನ್ನು ಸಿಬ್ಬಂದಿ ಮೂಲಕ ಮೇಲೆ ತೆಗೆಸಿದೆವು. ಸದರಿ ಶವವು ಸಾಮಾನ್ಯ ರೀತಿಯಲ್ಲಿ ಕಂಡು ಬಂತು. ಅಲ್ಲಿಗೆ ಬಂದಿದ್ದ ವೈದ್ಯಾಧಿಕಾರಿಗಳು ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ಸದರಿ ಮಗುವಿನ ತಂದೆ ಯಾರೆಂದು ತಿಳಿಯುವ ಸಲುವಾಗಿ ಡಿ ಎನ್ ಎ ಪರೀಕ್ಷೆ ಮಾಡಿಸುವ ಉದ್ದೇಶಕ್ಕಾಗಿ ತೆಗೆದುಕೊಂಡರು.

3. ಸದರಿ ಸ್ಥಳದಲ್ಲಿ ಜರುಗಿಸಲಾದ ಪ್ರಕ್ರಿಯೆಯ ಬಗ್ಗೆ ಪೊಲೀಸರು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನನ್ನ ಮತ್ತು ಪಂಚರ ಸಮಕ್ಷಮ ಮಹಜರನ್ನು ಜರುಗಿಸಿದರು.

4. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಯಿತು.

5. ಸದರಿ ಪಂಚನಾಮೆಗೆ ನನ್ನ ಜೊತೆ ಸ್ಥಳದಲ್ಲಿ ಹಾಜರಿದ್ದ ಪೊಲೀಸರು, ವೈದ್ಯಾಧಿಕಾರಿಗಳು, ಸ್ಥಳದಲ್ಲಿ ಹಾಜರಿದ್ದ ಮೃತ ಮಗುವಿನ ಸಂಬಂಧಿಕರು, ನಗರ ಸಭಾ ಸಿಬ್ಬಂದಿಗಳು ಸಹಿ ಮಾಡಿದ್ದಾರೆ.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿ ಪರವಾಗಿಃ</u>

6. ಶವವನ್ನು ಹೊರತೆಗೆಯುವ ಮೊದಲು ನೀವು ಯಾವೆಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ವೈದ್ಯಾಧಿಕಾರಿಗಳು ಮತ್ತು ನಗರ ಸಭೆಯ ಸಿಬ್ಬಂದಿಗಳಿಗೆ ಮಾಹಿತಿ ನೀಡಿ ಸ್ಥಳಕ್ಕೆ ಕರೆಯಿಸಿಕೊಂಡಿದ್ದೇನೆ ಎನ್ನುತ್ತಾರೆ. ಅವರಿಗೆ ನೀವು ನೋಟೀಸನ್ನು ಕೊಟ್ಟಿದ್ದಿರೇ ಎಂದರೆ ಸಾಕ್ಷಿ ಲಿಖಿತವಾಗಿ ಕೊಟ್ಟಿರಲಿಲ್ಲ, ಮೌಖಿಕವಾಗಿ ಕರೆಸಿಕೊಂಡಿದ್ದೆನು ಎನ್ನುತ್ತಾರೆ. ಶವವನ್ನು ಹೊರತೆಗೆಯುವ ಸಮಯದಲ್ಲಿ ಸ್ಥಳದಲ್ಲಿ ಎಷ್ಟು ಜನರಿದ್ದರು ಎಂದರೆ ಸಾಕ್ಷಿ ಸುಮಾರು 15 ಜನರು ಇದ್ದರು ಎನ್ನುತ್ತಾರೆ. ಆ ಬಗ್ಗೆ ನಿಪಿ.21 ಮಹಜರಿನಲ್ಲಿ ನಮೂದು ಮಾಡಿಲ್ಲ.

7. ಶವವನ್ನು ಹೊರತೆಗೆದ ಸಮಯದಲ್ಲಿ ಅದರ ತಲೆಯ ಭಾಗದಲ್ಲಿ, ಕುಂಡಿಯ ಭಾಗದಲ್ಲಿ ಮತ್ತು ಎರಡೂ ಕೈಗಳ ಕೆಳಗಿನ ಭಾಗದ ಮಣ್ಣನ್ನು ಸಂಗ್ರಹಿಸಿಕೊಂಡಿರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಶವವನ್ನು ಹೊರತೆಗೆದು ಕೇವಲ ಅದರ ಬಲಕಾಲಿನ ತೊಡೆಯ ಮೂಳೆಯನ್ನು ವೈಧ್ಯರು ತೆಗೆದುಕೊಂಡರು. ಸದರಿ ಮೂಳೆಯನ್ನು ನನ್ನ ಸಮಕ್ಷಮದಲ್ಲಿ ಪ್ಯಾಕ್ ಮಾಡಿ, ಸೀಲು ಮಾಡಿಕೊಳ್ಳಲಾಯಿತು. ಆದರೆ ಅದರ ಮೇಲೆ ನನ್ನ ಸಹಿಯನ್ನು ಪಡೆದಿಲ್ಲ. ಪಂಚರ ಸಹಿ ಇರುವ ಚೀಟಿಗಳನ್ನು ಅದರ ಮೇಲೆ ಅಂಟಿಸಲಾಗಿತ್ತೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.
8. ನಿಪಿ.21 ಪಂಚನಾಮೆಯನ್ನು ಪೊಲೀಸರು ನನ್ನ ಸಮಕ್ಷಮ ತಯಾರಿಸಿದರು. ಶವವನ್ನು ಹೊರತೆಗೆಯುವ ಪ್ರಕ್ರಿಯೆಯನ್ನು ನಡೆಸಲು ನಿಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ